ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 24-10-2016

# ಪತ್ರಿಕಾ ಆಮಂತ್ರಣ

1. **1 ನೇ ತಂಡದ ಸಿವಿಲ್ ಪೋಲೀಸ್ ಕಾನ್ಸ್‌ಟೇಬಲ್‌ಗಳ ನಿರ್ಗಮನ ಪಥಸಂಚಲನ:**
   ಮುಖ್ಯ ಅತಿಥಿಗಳು:
   ಓಂ ಪ್ರಕಾಶ್, ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷರು, ಕರ್ನಾಟಕ ರಾಜ್ಯ, ಬೆಂಗಳೂರು.
   ಉಪಸ್ಥಿತಿ:
   ಪ್ರೇಮ್ ಶಂಕರ್ ಮೀನಾ. ಪೋಲೀಸ್ ಮಹಾ ನಿರ್ದೇಶಕರು, ತರಬೇತಿ, ಬೆಂಗಳೂರು.
   ಅಲೋಕ್ ಕುಮಾರ್, ಪೊಲೀಸ್ ಮಹಾ ನಿರೀಕ್ಷಕರು, ತರಬೇತಿ, ಬೆಂಗಳೂರು.
   ದಿನಾಂಕ: **25-10-2016** ರ ಮಂಗಳವಾರ, ಬೆಳಿಗ್ಗೆ **9-00** ಗಂಟೆಗೆ.
   ಸ್ಥಳ: ಪೋಲೀಸ್ ವಾಹನ ಚಾಲನೆ ಮತ್ತು ಸಂರಕ್ಷಣಾ ಶಾಲೆಯ ಕವಾಯತು ಮೈದಾನ, ಯಲಹಂಕ, ಬೆಂಗಳೂರು.

2. Regional Conference by NABARD on "Doubling Farmers" Income".
   Inaugural Address : Krishna Byre Gowda, Minister for Agriculture, Govt. of Karnataka.
   Key Note Address: Smt Latha Krishna Rao,-ACS & DC. Gok.
   Special Address : Ashok Dalwai, Addl. Secy, GoI
   Eugene E. Karthak, RD, RBI
   Date: 25-10-2016 Tuesday. Times 10.00 AM
   Place : NABARD Towers, 46, K.G. Road, Bengaluru – 560 009.

3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗೆ ನಿರ್ಮಿಸಲು ಉದ್ದೇಶಿಸಿರುವ ಮೇಲ್ಸೇತುವೆ (Elevated Bridge) ನಿರ್ಮಾಣ, ಉಪಯುಕ್ತತೆ ಕುರಿತಂತೆ ಪ್ರಾತ್ಯಕ್ಷಿಕೆ ಹಾಗೂ ವಿವರಣೆ
ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್ ಅವರಿಂದ
ದಿನಾಂಕ: 25-10-2016 ರ ಮಂಗಳವಾರ, ಮಧ್ಯಾಹ್ನ 2-45 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 419, ಸಮ್ಮೇಳನ ಸಭಾಂಗಣ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.

## <u>ಪತ್ರಿಕಾ ಆಮಂತ್ರಣ</u>

# ಮಾಧ್ಯಮ ಪ್ರತಿನಿಧಿಗಳ ಗಮನಕ್ಕೆ

ನವೆಂಬರ್ 21 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನ ವರದಿಗಾಗಿ ಬೆಂಗಳೂರಿನಿಂದ ತೆರಳುವ ಮಾಧ್ಯಮ ಪ್ರತಿನಿಧಿಗಳಿಗೆ ಪಾಸ್ ಹಾಗೂ ಇತರೆ ವ್ಯವಸ್ಥೆಗಾಗಿ ವಿವಿಧ ಮಾಧ್ಯಮ ಸಂಸ್ಥೆಗಳಿಗೆ ಸಂಖ್ಯೆ ನಿಗದಿಪಡಿಸಲಾಗಿದೆ. ಅದರನ್ವಯ ಆಯಾ ಮಾಧ್ಯಮ ಕಚೇರಿಯಿಂದ ಮಾಧ್ಯಮ ಪ್ರತಿನಿಧಿಗಳ ವಿವರವನ್ನು ಈ ಕೆಳಕಂಡ ನಮೂನೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಅಕ್ಟೋಬರ್ 27 ರೊಳಗೆ ಸಲ್ಲಿಸಬೇಕು.

1) ಮುದ್ರಣ ಮಾಧ್ಯಮ: ರಾಜ್ಯ ಮತ್ತು ರಾಷ್ಟ್ರಮಟ್ಟದ ದಿನಪತ್ರಿಕೆಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 1 ಛಾಯಾಗ್ರಾಹಕರಿಗೆ ಅವಕಾಶ.

2) ವಿದ್ಯುನ್ಮಾನ ಮಾಧ್ಯಮ: ರಾಜ್ಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 4 ಕ್ಯಾಮರಾಮನ್‌ಗಳಿಗೆ ಅವಕಾಶ, ರಾಷ್ಟ್ರೀಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ 2 ವರದಿಗಾರರು ಮತ್ತು 2 ಕ್ಯಾಮರಾಮನ್‌ಗಳಿಗೆ ಅವಕಾಶ.

3) ಸುದ್ದಿ ಸಂಸ್ಥೆ: ಮಾನ್ಯತಾ ಪತ್ರ ಹೊಂದಿರುವ ಸುದ್ದಿ ಸಂಸ್ಥೆಯ ಇಬ್ಬರು ಪ್ರತಿನಿಧಿಗಳಿಗೆ ಅವಕಾಶ.

4) ಅನ್ಯ ಭಾಷೆಯ ದಿನಪತ್ರಿಕೆಗಳು: ಅನ್ಯ ಭಾಷೆಯ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಬೆಂಗಳೂರಿನ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಮಾನ್ಯತಾ ಪತ್ರ ಹೊಂದಿರುವ 2 ವರದಿಗಾರರಿಗೆ ಅವಕಾಶ.

**ಸೂಚನೆ: ಬೆಳಗಾವಿ ಜಿಲ್ಲೆಯನ್ನು ಹೊರತು ಪಡಿಸಿ ಸಮೀಪದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಪ್ರತಿನಿಧಿಗಳನ್ನು ನಿಯೋಜಿಸುವುದಿದ್ದಲ್ಲಿ ನಿಗದಿತ ಕೋಟಾದಡಿಯಲ್ಲಿ ಅವರ ಹೆಸರನ್ನು ಈ ಪಟ್ಟಿಯಲ್ಲಿಯೇ ಸೇರಿಸಿ ಕಳುಹಿಸಬೇಕು.**

| ಕ್ರ.ಸ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ | ಈ ಮೇಲ್ ವಿಳಾಸ |
|---|---|---|---|---|
| **1** | | | | |

**ವಿಶೇಷ ಸೂಚನೆ: ಈಗಾಗಲೇ ವಿಧಾನ ಪರಿಷತ್ ಮತ್ತು ವಿಧಾನ ಸಭೆಗೆ ಪ್ರವೇಶ ಪತ್ರ ಪಡೆದಿರುವವರು ಬೆಳಗಾವಿ ವಿಧಾನಮಂಡಲ ಅಧಿವೇಶನಕ್ಕೂ, ಅದೇ ಪ್ರವೇಶ ಪತ್ರವನ್ನು ಬಳಸಬಹುದು. ಪ್ರವೇಶ ಪತ್ರ ಪಡೆಯದಿರುವ ಮಾಧ್ಯಮ ಪ್ರತಿನಿಧಿಗಳು ತಲಾ ಎರಡು ಭಾವಚಿತ್ರವನ್ನು ಸಲ್ಲಿಸಬೇಕು.**

## ಪತ್ರಿಕಾ ಪ್ರಕಟಣೆ

# ’ಸರ್ವರಿಗೂ ಸೂರು’ ಪರಿಕಲ್ಪನೆಯ ಸಾಕಾರಕ್ಕೆ ಸರ್ಕಾರದ ದಿಟ್ಟ ಹೆಜ್ಜೆ

**– ವಸತಿ ಸಚಿವ ಎಂ. ಕೃಷ್ಣಪ್ಪ**

ಬೆಂಗಳೂರು, ಅಕ್ಟೋಬರ್ 24 (ಕರ್ನಾಟಕ ವಾರ್ತೆ)

ಜಿ.ಎಫ್.ಆರ್.ಜಿ. ತಂತ್ರಜ್ಞಾನವನ್ನು (ಗ್ಲಾಸ್ ಫೈಬರ್ ರೀಇನ್‌ಪೋರ್ಸ್ಡ್ ಜಿಪ್ಸಂ ಪಾನೆಲ್) ಅಳವಡಿಸಿಕೊಂಡು ಅತೀ ಕಡಿಮೆ ಅವಧಿಯಲ್ಲಿ ಕಟ್ಟಡಗಳನ್ನು ನಿರ್ಮಿಸುವ ಮೂಲಕ 'ಸರ್ವರಿಗೂ ಸೂರು' ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ದೊಡ್ಡ ಹೆಜ್ಜೆಯೊಂದನ್ನು ಇಡಲಾಗುತ್ತಿದೆ ಎಂದು ವಸತಿ ಸಚಿವ ಎಂ. ಕೃಷ್ಣಪ್ಪ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿಯ ಚಿಕ್ಕಬೆಟ್ಟಹಳ್ಳಿಯ ಕಾರ್ಣಿಕ್ ಸಂಸ್ಥೆಯ ಆವರಣದಲ್ಲಿ ಜಿಎಫ್.ಆರ್.ಜಿ. ತಂತ್ರಜ್ಞಾನ ಹೊಂದಿರುವ (ಜಿ+1) ಮಾದರಿ ಅತಿಥಿ ಗೃಹ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಾ, ಈ ತಂತ್ರಜ್ಞಾನ ಬಳಸಿಕೊಂಡು ಮೊದಲಿಗೆ ಅತಿಥಿ ಗೃಹವನ್ನು ಇನ್ನು ಎರಡು ತಿಂಗಳಲ್ಲಿ ನಿರ್ಮಾಣ ಮಾಡಲಾಗುವುದು ನಂತರ ಮುಂದಿನ ದಿನಗಳಲ್ಲಿ

ನೆಲ ಅಂತಸ್ತು ಸೇರಿದಂತೆ ಎಂಟು ಅಂತ್ತಸಿನ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಬೆಂಗಳೂರಿನ ಅತಿ ಕಡುಬಡವರಿಗೆ ನಿಯಮಾನುಸಾರ ಮನೆಗಳನ್ನು ವಿತರಿಸಲಾಗುವುದು. ಬೆಂಗಳೂರಿನಲ್ಲಿ ಮುಂದಿನ ಒಂದು ವರ್ಷದೊಳಗೆ ಹತ್ತು ಸಾವಿರ ಮನೆಗಳನ್ನು ನಿರ್ಮಿಸುವ ಉದ್ದೇಶವಿದೆ ಎಂದರು.

ರಸಗೊಬ್ಬರ ತಯಾರಿಕೆಯಲ್ಲಿ ದೊರಕುವ ಘನ ತ್ಯಾಜ್ಯ ಜಿಪ್ಸಂ ಅನ್ನು ಕಟ್ಟಡ ಕಟ್ಟಲು ಬಳಸಿಕೊಳ್ಳುವುದರಿಂದ ಪರಿಸರ ಸಂರಕ್ಷಣೆ ಮಾಡಿದಂತಾಗುತ್ತದೆ. ಗಾಜಿನ ಎಳೆಗಳನ್ನು ಸೇರಿಸಿ ತಯಾರಿಸಲಾಗುವ ಜಿಪ್ಸಂ ಹಲಗೆಗಳನ್ನು ಮನೆಗಳ ಗೋಡೆಗಳಾಗಿ ಉಪಯೋಗಿಸುವ ಪ್ರಯೋಗವನ್ನು ಮೊದಲಿಗೆ ಆಸ್ಟ್ರೇಲಿಯಾ ದೇಶದಲ್ಲಿ ಮಾಡಲಾಗಿದೆ. ನಮ್ಮ ದೇಶದಲ್ಲಿ  ಚೆನ್ನೈನ ಐ.ಐ.ಟಿ ಶಾಖೆಯಲ್ಲಿ ಪ್ರಯೋಗವನ್ನು ಮುಂದುವರೆಸಿ ಈ ಜಿಪ್ಸಂ ಹಲಗೆಗಳನ್ನು ಕಟ್ಟಡದ ತಾರಸಿಗೂ ಉಪಯೋಗಿಸಲು ಬೇಕಾದ  ಸೂಕ್ತ ತಾಂತ್ರಿಕತೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ವಿನ್ಯಾಸಗಳಂತೆ ಯಾವುದೇ ಕಾಂಕ್ರಿಟ್ ಕಂಬ ಅಥವಾ ಬೀಮ್‌ಗಳಿಲ್ಲದೆ ಎಂಟು ಮಹಡಿವರೆಗಿನ ಕಟ್ಟಡಗಳನ್ನು ನಿರ್ಮಿಸಬಹುದಾಗಿದೆ ಎಂದು ಸಚಿವರು ವಿವರಿಸಿದರು.

ಜಿ.ಎಫ್.ಆರ್.ಜಿ. ತಂತ್ರಜ್ಞಾನದ ಮೂಲಕ ಸರ್ಕಾರಿ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿ  ಪ್ರಥಮ ಆದ್ಯತೆಯಲ್ಲಿ  ಬೆಂಗಳೂರು ನಗರ ತದನಂತರ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಬಿಪಿಎಲ್ ಕಾರ್ಡುದಾರರಿಂದ ಅರ್ಜಿ ಆಹ್ವಾನಿಸಿ ಅದನ್ನು ಆಧಾರ್ ಕಾರ್ಡ್‌ಗೆ ಲಿಂಕ್‌ಮಾಡುವ ಮೂಲಕ ಪಾರದರ್ಶಕವಾಗಿ ಫಲಾನುಭವಿಗಳನ್ನು ಆಯ್ಕೆಮಾಡಿ ಹಂತ ಹಂತವಾಗಿ ವಿತರಿಸಲಾಗುವುದು ಎಂದರು.

ರಾಜೀವ್ ವಸತಿ ನಿಗಮದಿಂದ ಈ ವರ್ಷ ಆರು ಲಕ್ಷ ಮನೆಗಳನ್ನು ನಿರ್ಮಿಸಿ ಕಡುಬಡವರಿಗೆ ವಿತರಿಸಲಾಗುವುದು.  ಅಂತೆಯೇ ದೇವರಾಜ್ ಅರಸು ನಿಗಮದಿಂದ ವಿಶೇಷ ವರ್ಗದಡಿ ಅಂಗವಿಕಲರಿಗೆ ಸುಮಾರು 20,000 ಮನೆಗಳನ್ನು ವಿತರಿಸಲಾಗಿದ್ದು, ಈ ನಿಗಮದಡಿ ಇನ್ನೂ ಹೆಚ್ಚಿನ ಮನೆಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಲಾಗಿದೆ ಎಂದರು.

ಸಿಂಗನಾಯಕನಹಳ್ಳಿ, ರಾಜಾನುಕುಂಟೆ ಬಳಿ ನಿರ್ಮಿಸಲಾಗಿರುವ ಮನೆಗಳನ್ನು 2017 ರ ಸೆಪ್ಟೆಂಬರ್ ಒಳಗಾಗಿ ಶೇ.100ರಷ್ಟು ಸಂಪೂರ್ಣವಾಗಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಎಸ್.ಆರ್. ವಿಶ್ವನಾಥ್, ಬಿ.ಬಿ.ಎಂ.ಪಿ. ಸದಸ್ಯರಾದ ಶ್ರೀಮತಿ ಎಂ. ನೇತ್ರಾಪಲ್ಲವಿ, ರಾಜೀವ್‌ಗಾಂಧಿ ವಸತಿ ನಿಗಮ ನಿಲಯದ ವ್ಯವಸ್ಥಾಪಕ

ನಿರ್ದೇಶಕರಾದ ಮುನೀಷ್ ಮೌದ್ಗಿಲ್, ರಾಜ್ಯ ನಿರ್ಮಾಣದ ಕೇಂದ್ರದ ನಿರ್ದೇಶಕ ಎಂ. ಭಾಸ್ಕರ್ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಎಂ:ಎಂಆರ್‌ಎಂ/ಜಿಪಿಆರ್.

## ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ 2015 ಮತ್ತು 2016

ಬೆಂಗಳೂರು, ಅಕ್ಟೋಬರ್ 24 (ಕರ್ನಾಟಕ ವಾರ್ತೆ)

ಕರ್ನಾಟಕ ನಾಟಕ ಅಕಾಡೆಮಿ ಮೇಲಿನ ಸಾಲುಗಳಿಗೆ ಗೌರವ ಪ್ರಶಸ್ತಿ, ವಾರ್ಷಿಕ ಪ್ರಶಸ್ತಿ, ಹಾಗೂ ದತ್ತಿ ನಿಧಿ ಪ್ರಶಸ್ತಿಗಳಿಗೆ ಅರ್ಹ ರಂಗಸಾಧಕರನ್ನು ಆಯ್ಕೆ ಮಾಡಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಕಲಾವಿದರನ್ನು ಸರ್ವಸದಸ್ಯರ ಸಭೆಯು ಪ್ರಶಸ್ತಿಗೆ ಆಯ್ಕೆ ಮಾಡುವಾಗ ಜಿಲ್ಲಾ ಪ್ರಾತಿನಿಧ್ಯ ರಂಗಭೂಮಿಯ ಪ್ರಕಾರಗಳಾದ ವೃತ್ತಿರಂಗಭೂಮಿ, ಮಕ್ಕಳ ರಂಗಭೂಮಿ, ಹವ್ಯಾಸಿ, ಗ್ರಾಮೀಣ, ಪೌರಾಣಿಕ ರಂಗಭೂಮಿ ಹಾಗೂ ನೇಪಥ್ಯ, ಸಂಗೀತ, ಮೇಕಪ್, ರಂಗಸಂಗೀತ ಇತ್ಯಾದಿ ಪ್ರಕಾರಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ.

**ರಂಗಸಾಧನೆ ಗೌರವ ಪ್ರಶಸ್ತಿ:**

ಕರ್ನಾಟಕ ರಂಗಭೂಮಿಗೆ ದೀರ್ಘಕಾಲ ಸೇವೆಸಲ್ಲಿಸಿ, ರಂಗಭೂಮಿಯ ಘನತೆ ಗೌರವಗಳನ್ನು ಹೆಚ್ಚಿಸಲು ಕಾರಣರಾದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.50,000/-ಗಳ ಪುರಸ್ಕಾರವೂ ಸೇರಿರುತ್ತದೆ.

2015ನೇ ಸಾಲಿನ ಗೌರವ ಪ್ರಶಸ್ತಿಗೆ – ಶ್ರೀಮತಿ ಮಾನೂಬಾಯಿ ನಾಕೋಡ, ದಾವಣಗೆರೆ

2016ನೇ ಸಾಲಿನ ಗೌರವ ಪ್ರಶಸ್ತಿಗೆ – ಶ್ರೀ ಹಂಸಲೇಖ, ಬೆಂಗಳೂರು

### ಅಕಾಡೆಮಿ ವಾರ್ಷಿಕ ಪ್ರಶಸ್ತಿ-2015

ಕರ್ನಾಟಕದ ರಂಗಭೂಮಿಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು, ಅದರ ಯಾವುದಾದರೂ ಒಂದು ಅಥವಾ ಹಲವು ವಿಭಾಗಗಳಲ್ಲಿ ಉತ್ತಮ ಕಾರ್ಯ ಸಾಧನೆಯನ್ನು ಮಾಡಿ ರಂಗಭೂಮಿಗೆ ವಿಶೇಷ ಸೇವೆ ಸಲ್ಲಿಸಿದ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.25,000/-ಗಳ ಪುರಸ್ಕಾರವೂ ಸೇರಿರುತ್ತದೆ.

**2015 ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಹೆಸರು**

ಶ್ರೀ /ಶ್ರೀಮತಿ

1. ದೇವಿರಪ್ಪ ಶಿವಪ್ಪ ಬಣಕಾರ (ಹಾವೇರಿ ಜಿಲ್ಲೆ ನಟ)

2.ವೆಂಕಟೇಶ ಕುಲಕರ್ಣಿ, (ಬಾಗಲಕೋಟೆ ಜಿಲ್ಲೆ ನಾಟಕಮಾಸ್ತರು, ನಿರ್ದೇಶಕರು)

3. ಕೆ.ವಿ.ಕೃಷ್ಣಯ್ಯ, ಬೆಂಗಳೂರು ನಗರ ನಾಟಕಕಾರರು

4. ಪೂಜಾರ ಚಂದ್ರಪ್ಪ, ದಾವಣಗೆರೆ ನಟ, ಹಾರ್ಮೋನಿಯಂ ಮಾಸ್ತರ್

5. ಟಿ.ಆರ್.ರಾಮಚಂದ್ರರಾವ್, ಬೆಂಗಳೂರು ನೇಪಥ್ಯ

6.ಕೆ.ವಿ.ವೆಂಕಟೇಶ್, ಚಾಮರಾಜನಗರ ನಟ

7. ಸೂರಯ್ಯ ಎಸ್.ಕೆ, ಚಿತ್ರದುರ್ಗ ನಟ

8. ಸರೋಜಿನಿ, ಮೈಸೂರು ನಟಿ

9. ವಿಠ್ಠಲಕೊಪ್ಪ, ಧಾರವಾಡ ನಟ

10. ಕಿಶೋರ್ ಡಿ ಶೆಟ್ಟಿ, ಮಂಗಳೂರು ನಟ, ಸಂಘಟಕ

11. ಚಂದ್ರು ಉಡುಪಿ.ಶಿರಸಿ ಉತ್ತರ ಕನ್ನಡ ನಟಿ.ನೇಪಥ್ಯ

12. ಮಾನಮ್ಮ ರಾಯನಗೌಡ ರಾಯಚೂರು ನಟಿ, ಗಾಯಕಿ

13. ವನಜಶ್ರೀ ಶೆಟ್ಟಿ ಬೆಂಗಳೂರು ನಟಿ

14. ಬಿ.ಇ.ತಿಪ್ಪೇಸ್ವಾಮಿ ದಾವಣಗೆರೆ ನಟ, ಹಾರ್ಮೋನಿಯಂ ಮಾಸ್ತರ್

15. ಪರಶುರಾಮ ಪ್ರಿಯ ಕೊಪ್ಪಳ ನಟ, ನಿರ್ದೇಶಕ

**ಅಕಾಡೆಮಿ ವಾರ್ಷಿಕ ಪ್ರಶಸ್ತಿ-2016**

ಕರ್ನಾಟಕದ ರಂಗಭೂಮಿಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು, ಅದರ ಯಾವುದಾದರೂ ಒಂದು ಅಥವಾ ಹಲವು ವಿಭಾಗಗಳಲ್ಲಿ ಉತ್ತಮ ಕಾರ್ಯ ಸಾಧನೆಯನ್ನು ಮಾಡಿ ರಂಗಭೂಮಿಗೆ ವಿಶೇಷ ಸೇವೆ ಸಲ್ಲಿಸಿದ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. 2016ನೇ ಸಾಲಿನಿಂದ ವಾರ್ಷಿಕ ಪ್ರಶಸ್ತಿ ಸಂಖ್ಯೆಯನ್ನು 25ಕ್ಕೆ ಹೆಚ್ಚಿಸಿ ಸರ್ಕಾರ ಆದೇಶ ನೀಡಿರುತ್ತದೆ. ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.25,000/-ಗಳ ಪುರಸ್ಕಾರವೂ ಸೇರಿರುತ್ತದೆ.

**2016 ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಹೆಸರು**

ಶ್ರೀ /ಶ್ರೀಮತಿ

1 ಎಲ್.ರಾಮಕೃಷ್ಣ, ಬೆಂಗಳೂರು ಗ್ರಾಮಾಂತರ ನಿರ್ದೇಶನ

2 ವಿರೂಪಾಕ್ಷರಾವ್ ಮೊರಗೇರಿ ಬಳ್ಳಾರಿ ತಬಲ

3 ಬಸವರಾಜ ಹೂಗಾರ

61 ವಿಜಯಪುರ ತಬಲ

4 ಮಾಹಂತಯ್ಯ ಖಾನಪೂರ, ಯಾದಗಿರಿ ಹಾರ್ಮೋನಿಯಂ

5 ಹೆಚ್.ಹನುಮಂತ ನರಬೋಳಿ, ಕಲಬುರ್ಗಿ ತಬಲಾ

6 ಆಶೋಕ ನೇಸರಗಿ, ಬೆಳಗಾವಿ ನಟ, ನಾಟಕಾರರು

7 ಸಿದ್ದಪ್ಪ ನಿಂಗಪ್ಪ ಗುಳ್ಳೆ ಗದಗ ಹಾರ್ಮೋನಿಯಂ

8 ಭಾಗ್ಯಶ್ರೀ, ಬೆಂಗಳೂರು ನಟಿ

9 ಮಹದೇವಪ್ಪ ಹುಣಶ್ಯಾಳ, ಬೀದರ್ ನೇಪಥ್ಯ

10 ಬೈರ್ನಯಳ್ಳಿ ಶಿವರಾಂ, ರಾಮನಗರ ನಿರ್ದೇಶನ

11 ಚೌಡಶೆಟ್ಟಿ, ಮಂಡ್ಯ ನಿರ್ದೇಶನ

12 ವೆಂಕಟೇಶ್, ಹಾಸನ ನಟ

13 ವಾಸುದೇವರಾವ್, ಉಡುಪಿ ನಟ

14 ಲಕ್ಷ್ಮಣದಾಸ್, ತುಮಕೂರು ನಟ,ನಿರ್ದೇಶನ

15 ಚೇತನ ಡಿ ಪ್ರಸಾದ್ ಕೋಲಾರ ನಟ

16 ಕಮಲಮ್ಮ ಬೀಳಗಿ, ಬಾಗಲಕೋಟೆ ನಟಿ

17 ಆಂಜನೇಯ, ಬೆಂಗಳೂರು ಗ್ರಾಮಾಂತರ ನಟ, ನಾಟಕಕಾರರು

18 ಲಲಿತಾ ಸಣ್ಣಂಗಿ,ಹಾವೇರಿ ನಟಿ

19 ವಿಜಯಕಾಶಿ, ಶಿವಮೊಗ್ಗ ನಟ

20 ಛಾಯಾ ರೆಡ್ಡಿ ಧಾರವಾಡ ನಟಿ

21 ಪ್ರೇಮಾ ಆರ್ ತಾಳೀಕೋಟೆ, ವಿಜಯಪುರ ನಟಿ

22 ವೆಂಕಟೇಶ್ ಹೆಗಡೆ, ಉತ್ತರ ಕನ್ನಡ ನಟ

23 ಸುಂದರಮೂರ್ತಿ ಆಲೆಮನೆ, ಬೆಂಗಳೂರು ಮೇಕಪ್

24 ಎ.ಭದ್ರಪ್ಪ, ದಾವಣಗೆರೆ ಸಂಘಟಕ

25 ಜಿ.ಎಂ.ಸಿದ್ದರಾಜು, ಮಂಡ್ಯ ನಟ

ಕಲ್ಚರ್ಡ್ ಕೆಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರ ಪ್ರಶಸ್ತಿ:

ಕನ್ನಡ ರಂಗಭೂಮಿಯ ಖ್ಯಾತ ರಂಗನಟ, ಮಾಸ್ಟರ್ ಹಿರಣ್ಣಯ್ಯನವರು ರೂ.1,00,000/-ಗಳನ್ನು ಅಕಾಡೆಮಿಗೆ ದತ್ತಿಯಾಗಿ ನೀಡಿರುತ್ತಾರೆ. ರಂಗಭೂಮಿಯ ಅಭಿವೃದ್ದಿಗೆ ಕೊಡುಗೆ ನೀಡಿದ ವೃತ್ತಿರಂಗ ನಟರಿಗೆ, ಅಥವಾ ಸಂಸ್ಥೆಗೆ, ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.5,000/-ಗಳ ಪುರಸ್ಕಾರವೂ ಸೇರಿರುತ್ತದೆ

2015 – ಶ್ರೀ ಮದುಕೇಶ್ ಚಿಂದೋಡಿ,ದಾವಣಗೆರೆ

2016 – ಶ್ರೀ ಮಹದೇವಪ್ಪ ,ಬೆಂಗಳೂರು

**ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ ಪ್ರಶಸ್ತಿ**

:ಕನ್ನಡ ರಂಗಭೂಮಿಯ ಖ್ಯಾತ ನಟ, ನಿರ್ದೇಶಕ, ಮಾಲೀಕರು ಆದ ಚಿಂದೋಡಿ ವೀರಪ್ಪ ಅವರ ಮಗ ಚಿಂದೋಡಿ ಬಂಗಾರೇಶ ಅವರು ರೂ.1,00,000/- ಗಳನ್ನು ಅಕಾಡೆಮಿಗೆ ದತ್ತಿ ನೀಡಿರುತ್ತಾರೆ. ಪ್ರಸಕ್ತ ವರ್ಷದಿಂದ ವೃತ್ತಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಒಬ್ಬ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.5,000/-ಗಳ ಪುರಸ್ಕಾರವೂ ಸೇರಿರುತ್ತದೆ

2015 ಶ್ರೀ ಗೂಡು ಸಾಹೇಬ್ ಚಟ್ನಿಹಾಳ, ಬಾಗಲಕೋಟೆ

2016 ಶ್ರೀ ಬಿ.ಗಂಗಾಧರ, ತುಮಕೂರು

**ಪದ್ಮಶ್ರೀ ಶ್ರೀಮತಿ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿ**

ಕನ್ನಡ ರಂಗಭೂಮಿಯ ಖ್ಯಾತ ನಟಿ, ಮಾಲೀಕರು ಆದ ಚಿಂದೋಡಿ ಲೀಲಾ ಅವರ ಮಗ ಚಿಂದೋಡಿ ಚಂಧ್ರುದರ ಅವರು ರೂ.2,00,000/- ಗಳನ್ನು ಅಕಾಡೆಮಿಗೆ ದತ್ತಿ ನೀಡಿರುತ್ತಾರೆ. ಪ್ರಸಕ್ತ ವರ್ಷದಿಂದ ವೃತ್ತಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಒಬ್ಬ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿಯೊಂದಿಗೆ ನಟರಾಜ ವಿಗ್ರಹ, ಶಾಲು, ಹಾರ, ಪ್ರಶಸ್ತಿ ಪತ್ರ ಹಾಗೂ ರೂ.5,000/-ಗಳ ಪುರಸ್ಕಾರವೂ ಸೇರಿರುತ್ತದೆ.

2015 ಶ್ರೀಮತಿ ಮಮತಾ ಗುಡೂರು

2016 ಶ್ರೀಮತಿ ಉಮಾ, ರಾಣಿಬೆನ್ನೂರು

**ರಂಗಭೂಮಿಯ ಪುಸ್ತಕ ಪುರಸ್ಕಾರ**

ಕನ್ನಡ ರಂಗಭೂಮಿಗೆ ಸಂಬಂಧಿಸಿದ ಲೇಖನಗಳು, ವ್ಯಕ್ತಿ ಚಿತ್ರಗಳು, ರಂಗ ಸಾಧಕರ ಸೇವೆಯ ಮಾಹಿತಿ ಇಂತಹ ರಂಗಸಂಬಂಧಿ ಪ್ರಕಟಣೆಗಳಿಗೆ ಕರ್ನಾಟಕ ನಾಟಕ ಅಕಾಡೆಮಿಯು ರೂ.25,000/-ಗಳ ಮೊತ್ತವನ್ನೊಳಗೊಂಡ ಬಹುಮಾನ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ.

2014 ಶ್ರೀ ಪ್ರಕಾಶ ಗರುಡ – "ಕಂಪನಿ ನಾಟಕ ಅರ್ಥಾತ್ ವೃತ್ತಿರಂಗಭೂಮಿ"

## ವೃತ್ತಿ ಮತ್ತು ನಿರೂಪಣಾ ಕೌಶಲ್ಯ ತರಬೇತಿಗೆ ಅರ್ಜಿ ಸಲ್ಲಿಸಲು ಅಕ್ಟೋಬರ್ 28 ಕೊನೆ ದಿನ

ಬೆಂಗಳೂರು, ಅಕ್ಟೋಬರ್ 24 (ಕರ್ನಾಟಕ ವಾರ್ತೆ)

ಅಂಗೀಕೃತ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮೊ ಇನ್ ಜರ್ನಲಿಸಂ, ಹಾಗೂ ಆಡಿಯೋ ವಿಷುಯಲ್ ಪದವಿ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಪದವಿ ಪಡೆದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ 7 ದಿವಸಗಳ ವೃತ್ತಿ ಮತ್ತು ನಿರೂಪಣಾ ಕೌಶಲ್ಯ ತರಬೇತಿ ಶಿಬಿರವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಲಿದೆ.

ಅರ್ಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ವಿಭಾಗದಿಂದ ಹಾಗೂ ಜಿಲ್ಲಾ ವಾರ್ತಾ ಕಚೇರಿಗಳಿಂದ ಅರ್ಜಿ ನಮೂನೆಯನ್ನು ಪಡೆಯಬಹುದು. ಇಲ್ಲವೆ ವೆಬ್‌ಸೈಟ್ **www.karnatakavarthe.org** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಭ್ಯರ್ಥಿಯ ಹೆಸರು, ಜನ್ಮ ದಿನಾಂಕ, ಖಾಯಂ ವಿಳಾಸ, ವಿದ್ಯಾರ್ಹತೆ, ಜಾತಿ (ಉಪ ಜಾತಿ), ಶೇಕಡವಾರು ಅಂಕ, ವಾರ್ಷಿಕ ಆದಾಯ, ಉದ್ಯೋಗ ವಿವರ, ಈ ಹಿಂದೆ ಯಾವುದಾದರೂ ತರಬೇತಿ ಪಡೆದ ವಿವರ, ಸ್ವ-ವಿವರಗಳ ಮಾಹಿತಿಯನ್ನು ಭರ್ತಿಮಾಡಿ ಸ್ವ-ವಿಳಾಸವಿರುವ ಲಕೋಟೆಯೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು. ಈ ಪ್ರಕಟಣೆಗೆ ಮುನ್ನ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಹೊಸದಾಗಿ ಅರ್ಜಿ ಸಲ್ಲಿಸಬೇಕು. ಹಳೆಯ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ ಅರ್ಜಿಯೊಂದಿಗೆ ಅಂಕಪಟ್ಟಿ, ಜಾತಿ, ಪ್ರಮಾಣ ಪತ್ರ, ವಿಳಾಸ ಹಾಗೂ ವಯಸ್ಸನ್ನು ದೃಢೀಕರಿಸುವ ದಾಖಲೆಗಳ ಪ್ರತಿಯನ್ನು ದಿನಾಂಕ: 28-10-2016 ಸಂಜೆ 5-00 ಗಂಟೆಯೊಳಗೆ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001 ಇವರಿಗೆ ಸಲ್ಲಿಸಬೇಕು ಸದರಿ ಲಕೋಟೆಯ ಮೇಲ್ಭಾಗದಲ್ಲಿ " ಪತ್ರಿಕೋದ್ಯಮ ವೃತ್ತಿ ಮತ್ತು ನಿರೂಪಣಾ ಕೌಶಲ್ಯ ತರಬೇತಿ" ಎಂದು ನಮೂದಿಸಬೇಕು.

ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪದವಿಯನ್ನು ಪೂರ್ಣಗೊಳಿಸಿರುವವರು ಮಾತ್ರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸುದ್ದಿ ಮತ್ತು ಪತ್ರಿಕಾ ವಿಭಾಗದ ಸಂಬಂಧಿಸಿದ ಸಹಾಯಕ ನಿರ್ದೇಶಕರನ್ನು ಅಥವಾ ದೂರವಾಣಿ ಸಂಖ್ಯೆ 080 – 22028034/37 ಇವರನ್ನು ಸಂಪರ್ಕಿಸಬಹುದು.

# ನೋಂದಣಿ ಸಂಖ್ಯೆ ಪ್ರಕಟ

ಬೆಂಗಳೂರು, ಅಕ್ಟೋಬರ್ 24 (ಕರ್ನಾಟಕ ವಾರ್ತೆ)

**ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 18-09-2016 ರಂದು ನಡೆಸಿದ ಕರ್ನಾಟಕ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಮೂಹ ಎ ವೃಂದದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಒಟ್ಟು 25 ಹುದ್ದೆಗಳ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಮಾಹಿತಿಗಾಗಿ ಪ್ರಕಟಿಸಲಾಗಿದೆ.**

**ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳು ಮುಖ್ಯಪರೀಕ್ಷೆಗೆ ಮತ್ತೊಮ್ಮೆ ಅರ್ಜಿ ಸಲ್ಲಿಸುವಂತಿಲ್ಲ. ಆದರೆ ಮುಖ್ಯ ಪರೀಕ್ಷೆಗೆ ನಿಗದಿತ ಪರೀಕ್ಷಾ ಶುಲ್ಕವನ್ನು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೂ. 300/- ಇತರೆ ಅಭ್ಯರ್ಥಿಗಳಿಗೆ ರೂ. 500/-) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು -560 001 ಇವರ ಹೆಸರಿಗೆ ಐ.ಪಿ.ಒ. ಅಥವಾ ಡಿ.ಡಿ. ಯನ್ನು ಪಡೆಯತಕ್ಕದ್ದು. ಸದರಿ ಐ.ಪಿ.ಒ./ಡಿ.ಡಿ.ಯನ್ನು ನಿಮ್ಮ ಮನವಿಯೊಂದಿಗೆ ಆಯೋಗದ ಕೇಂದ್ರ ಕಚೇರಿ, ಉದ್ಯೋಗ ಸೌಧ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು - 560 001 ಇಲ್ಲಿಗೆ ದಿನಾಂಕ: 16-11-2016 ರೊಳಗಾಗಿ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ರವಾನಿಸತಕ್ಕದ್ದು. ನಿಗದಿತ ಪರೀಕ್ಷೆ ಶುಲ್ಕವನ್ನು ಪಾವತಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದೆಂದು ಆಯೋಗದ ಪ್ರಕಟಣೆ ತಿಳಿಸಿದೆ.**